OS No. 123/2020 PW-1

**<u>ದಿನಾಂಕ 01.09.2025 ರಂದು ಸಾಕ್ಷಿಯನ್ನು ಕರೆಯಿಸಿ, ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಂದುವರೆದ ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ ಹೆಚ್ ಟಿ ಎನ್ ವಕೀಲರಿಂದಃ</u>**

2. ದಿಃ17.09.2018 ರಲ್ಲಿ ಕ್ರಯದ ಕರಾರು ಮಾತುಕತೆಯಾಗಿರುತ್ತದೆ. ಈ ಸಮಯದಲ್ಲಿ ಪ್ರತಿವಾದಿಯ ಕಡೆಯವರು ಇಬ್ಬರು ನಮ್ಮ ಕಡೆಯವರು ಇಬ್ಬರು ಹಾಜರಿದ್ದೆವು. ಅದೇ ದಿನ 1ನೇ ಪ್ರತಿವಾದಿಯವರು ನನಗೆ ರೂಪಾಯಿ 16,25,000/- ನಗದು ಮತ್ತು 2 ಚೆಕ್ ಗಳನ್ನು ಕೊಟ್ಟಿದ್ದರು ಎಂದರೆ ಸುಳ್ಳು.ಸಾಕ್ಷಿ ಮುಂದುವರೆದು 2ಲಕ್ಷದ ಒಂದು ಚೆಕ್ ಮತ್ತು 3 ಲಕ್ಷದ ಒಂದು ಚೆಕ್ ಕೊಟ್ಟಿದ್ದರು ಎಂದು ನುಡಿಯುತ್ತಾರೆ. ನಿಪಿ- 5ರ ಕ್ರಯ ಪತ್ರದ ಒಕ್ಕಣೆಯಲ್ಲಿ ನನಗೆ ರೂಪಾಯಿ 16,25,000/- ನಗದು ಮತ್ತು 2 ಲಕ್ಷದ ಒಂದು ಚೆಕ್ ಮತ್ತು 3 ಲಕ್ಷದ ಒಂದು ಚೆಕ್ ಕೊಟ್ಟಿದ್ದರು ಎಂದು ತಿಳಿಸಿರುತ್ತಾರೆಂದರೆ ಸುಳ್ಳು. ಮನಸ್ಪೂರ್ತಿಯಾಗಿ ನಿಪಿ-5 ರ ಕ್ರಯ ಪತ್ರವನ್ನು ಸಾಕ್ಷಿದಾರರ ಸಮಕ್ಷಮ ಬರೆದುಕೊಟ್ಟಿರುತ್ತೇನೆಂದರೆ ಸುಳ್ಳು. ನಿಪಿ-5 ರ ಕ್ರಯ ಪತ್ರವನ್ನು ಮೋಸ ಮಾಡಿ ಬರೆಯಿಸಿಕೊಂಡಿರುತ್ತಾರೆಂದು ನುಡಿಯುತ್ತಾರೆ. ನಿಪಿ-5 ರ ಕ್ರಯ ಪತ್ರದ ಬಗ್ಗೆ ದೂರು ನೀಡಿಲ್ಲ. ದೂರು ನೀಡಲು ತೊಂದರೆ ಇರಲಿಲ್ಲ. ನಿಪಿ- 5ರ ಕ್ರಯ ಪತ್ರದ ಬಗ್ಗೆ ಯಾವುದೇ ಬೇರೆ ದಾವಾ ಹಾಕಿಲ್ಲ. ನಿಪಿ- 5ರ ಕ್ರಯ ಪತ್ರದ ಬಗ್ಗೆ ನ್ಯಾಯಾಲಯದಲ್ಲಿ ಪಿ ಸಿ ಆರ್ ಹಾಕಿಲ್ಲ. ಈ ರೀತಿ ದೂರು ನೀಡಲು ತೊಂದರೆ ಇರಲಿಲ್ಲ ಎಂದರೆ ನಿಜ.1ನೇ ಪ್ರತಿವಾದಿಯವರಿಗೆ ತೊಂದರೆ ಕೊಡಲು ಸುಳ್ಳು ದಾವಾ ಹಾಕಿರುತ್ತೇನೆಂದರೆ ಸುಳ್ಳು.1ನೇ ಪ್ರತಿವಾದಿಯೂ 2ನೇ ಪ್ರತಿವಾದಿಗೆ ಕಾನೂನು ಬದ್ದವಾಗಿ ಮಾರಾಟ ಮಾಡಿರುತ್ತಾರೆಂದರೆ ಗೊತ್ತಿಲ್ಲ. 2020ರವರೆಗೂ ದೂರು ನೀಡಿಲ್ಲ ಎಂದರೆ ನಿಜ. 1ನೇ ಪ್ರತಿವಾದಿಯು ನನಗೆ 5 ಲಕ್ಷ ಮತ್ತು 6 ಲಕ್ಷ ಕೊಡಬೇಕೆಂದು ಪ್ರಮಾಣ ಪತ್ರದಲ್ಲಿ ಸುಳ್ಳು ತಿಳಿಸಿರುತ್ತೇನೆಂದರೆ ಸುಳ್ಳು. ಪ್ರತಿವಾದಿ ನನಗೆ ಯಾವುದೇ ಚೆಕ್ ಕೊಟ್ಟಿಲ್ಲ ಮತ್ತು ಯಾವುದೇ ಕರಾರು ಪತ್ರ ಬರೆದುಕೊಟ್ಟಿಲ್ಲ ಎಂದರೆ ಸುಳ್ಳು. 1ನೇ ಪ್ರತಿವಾದಿಯು ಹಣದ ಭದ್ರತೆಗೆ ನನಗೆ ಚೆಕ್ ಅನ್ನು ಕೊಟ್ಟಿದ್ದರು ಎಂದರೆ ಸುಳ್ಳು. ನೊಂದಣಿಯಾದ ನಂತರ1ನೇ ಪ್ರತಿವಾದಿಯು ಚೆಕ್ ಅನ್ನು ವಾಪಸ್ಸು ಕೇಳಿದರು ಎಂದರೆ ಸುಳ್ಳು.

ನ್ಯಾಯಾಲಯದಿಂದ ಸಮನ್ಸ್ ಬಂದ ನಂತರ 1ನೇ ಪ್ರತಿವಾದಿಯು ಚೆಕ್ ಅನ್ನು ವಾಪಸ್ಸು ಕೇಳಿದರು ಎಂದರೆ ಸುಳ್ಳು. ಈ ಚೆಕ್ಕುಗಳನ್ನು ದುರುಪಯೋಗ ಪಡಿಸಿಕೊಂಡು ನ್ಯಾಯಾಲಯದಲ್ಲಿ 2 ಪ್ರಕರಣಗಳನ್ನು 1ನೇ ಪ್ರತಿವಾದಿಯ ವಿರುದ್ದ ಸಲ್ಲಿಸಿರುತ್ತೇನೆಂದರೆ ಸುಳ್ಳು.

3. ಪ್ರಸ್ತುತ ದಾವಾದಲ್ಲಿ 6 ಲಕ್ಷ ಪರಿಹಾರ ಪಡೆಯಲು ನಾನು ಅರ್ಹರಲ್ಲ ಎಂದರೆ ಸುಳ್ಳು. ದಾವಾ ಹಾಕುವ 15 ದಿನದ ಮೊದಲು 1ನೇ ಪ್ರತಿವಾದಿಗೆ ನೋಟೀಸ್ ಕೊಟ್ಟಿರುತ್ತೇನೆ. 1ನೇ ಪ್ರತಿವಾದಿಗೆ ಯಾವುದೇ ನೋಟೀಸ್ ಜಾರಿಯಾಗಿಲ್ಲ ಎಂದರೆ ಸುಳ್ಳು. ಪ್ರಮಾಣ ಪತ್ರದಲ್ಲಿರುವ ವಿಚಾರಗಳನ್ನು ನಾನು ತಿಳಿದುಕೊಂಡಿರುತ್ತೇನೆ. 1ನೇ ಪ್ರತಿವಾದಿಯು ನನ್ನ ಬಳಿ ಹಣ ಪಡೆಯುವ ಅವಶ್ಯಕತೆ ಇರಲಿಲ್ಲ ಎಂದರೆ ಸುಳ್ಳು.

ಪ್ರತಿವಾದಿಯ ಪರ ವಕೀಲರು ಮುಂದುವರೆದ ಪಾಟೀಸವಾಲಿಗಾಗಿ ಅನುಮತಿ ಕೋರಿದ್ದು, ಪರಿಶೀಲಿಸಿ ತಿರಸ್ಕರಿಸಲಾಯಿತು.

**<u>ಪಾಟೀ ಸವಾಲುಃ 2 ನೇ ಪ್ರತಿವಾದಿ ಪರ ಶ್ರೀ ವಕೀಲರಿಂದಃ</u>**

2 ನೇ ಪ್ರತಿವಾದಿಯ ಪರ ವಕೀಲರು ಪಾಟೀಸವಾಲಿಗಾಗಿ ಅನುಮತಿ ಕೋರಿದ್ದು, ಪರಿಶೀಲಿಸಿ ತಿರಸ್ಕರಿಸಲಾಯಿತು.

**<u>ಮರುವಿಚಾರಣೆಃ ಇಲ್ಲ.</u>**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನವನ್ನು ಗಣಕೀಕರಣ ಮಾಡಲಾಯಿತು)**Na**

ಓ.ಹೇ.ಕೇ.ಸ.ಒ

**(ವೆಂಕಟೇಶಪ್ಪ. ವಿ)**
**ಹಿರಿಯ ಸಿವಿಲ್ ನ್ಯಾಯಾಧೀಶರು**
**ಮತ್ತು ಜೆ.ಎಂ.ಎಫ್.ಸಿ.,ಚನ್ನಪಟ್ಟಣ.**